# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1094 (1057) |
| ಸದಸ್ಯರ ಹೆಸರು | : | ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 22-09-2022 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯ ಕಾಮಗಾರಿಗಳು ನಿಧಾನ ಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ತ್ವರಿತಗತಿಯಲ್ಲಿ ಈ ಕಾಮಗಾರಿಗಳನ್ನು ಮುಗಿಸಲು ಸರ್ಕಾರದ ಕ್ರಮವೇನು; | ಕೇಂದ್ರ ಹಾಗೂ ರಾಜ್ಯ ಪ್ರಾಯೋಜಿತ ಸ್ಮಾರ್ಟ್ ಸಿಟಿ ಅಭಿಯಾನವು ಜೂನ್-2015 ರಲ್ಲಿ ಪ್ರಾರಂಭವಾಗಿದ್ದು, ರಾಜ್ಯದಿಂದ ಈ ಕೆಳಕಂಡ 07 ನಗರಗಳು ಆಯ್ಕೆಯಾಗಿರುತ್ತವೆ.<br>1) ಬೆಳಗಾವಿ 2) ದಾವಣಗೆರೆ 3) ಹುಬ್ಬಳ್ಳಿ-ಧಾರವಾಡ 4) ಮಂಗಳೂರು 5) ಶಿವಮೊಗ್ಗ 6) ತುಮಕೂರು ಮತ್ತು 7) ಬೆಂಗಳೂರು<br><br>ಯೋಜನೆಯ ಮಾರ್ಗಸೂಚಿಯನುಸಾರ ಸ್ಮಾರ್ಟ್ ಸಿಟಿ ಯೋಜನೆಯಡಿ ಸ್ಮಾರ್ಟ್ ರಸ್ತೆಗಳ ಅಭಿವೃದ್ಧಿ, ಮಾರುಕಟ್ಟೆಗಳ ಪುನರಾಭಿವೃದ್ಧಿ, ಕೆರೆ ಪ್ರದೇಶಗಳ ಹಾಗೂ ಉದ್ಯಾನವನಗಳ ಅಭಿವೃದ್ಧಿ, ನದಿ ಪ್ರದೇಶಗಳ ಅಭಿವೃದ್ಧಿ, ಸ್ಮಾರ್ಟ್ ಸ್ಕೂಲ್ ಮತ್ತು ಕಮ್ಯಾಂಡ್ & ಕಂಟ್ರೋಲ್ ಸೆಂಟರ್ ಹೀಗೆ ಹಲವಾರು ವಲಯಗಳಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿದೆ.<br><br>ಸ್ಮಾರ್ಟ್ ಸಿಟಿ ಯೋಜನೆಯ ಅನುಷ್ಠಾನದಲ್ಲಿ ಇಲ್ಲಿಯವರೆಗೆ ಕಂಡುಬಂದಿರುವ ಪ್ರಮುಖ ಸವಾಲುಗಳು ಈ ಕೆಳಕಂಡಂತಿವೆ;<br>• ಸ್ಮಾರ್ಟ್ ಸಿಟಿ ಅಭಿಯಾನವು ಇತರೆ ಯೋಜನೆಗಳಿಂದ ಭಿನ್ನವಾಗಿದ್ದು, ಹಲವು ಹೊಸ ರೀತಿಯ ನಿಯಮಾವಳಿಗಳ ರಚನೆ ಹಾಗೂ ಪಾಲನೆ ಅಗತ್ಯವಾಗಿರುತ್ತದೆ. ಈ ನಿಯಮಗಳನ್ನು ರೂಪಿಸಲು ಸಾಕಷ್ಟು ಕಾಲಾವಧಿ ಹಿಡಿದಿರುತ್ತದೆ. ವಿಶೇಷ ಉದ್ದೇಶಿತ ವಾಹನಗಳ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ ಕಾರ್ಯಾಚರಣೆಗಾಗಿ ವಿಶೇಷವಾದ ಆರ್ಥಿಕ ಅಧಿಕಾರವನ್ನು ಸರ್ಕಾರವು ಅಭಿಯಾನದ ಮಾರ್ಗಸೂಚಿಯಂತೆ ಪ್ರತ್ಯಾಯೋಜಿಸಿರುತ್ತದೆ. ಈ ರೀತಿ ಅಧಿಕಾರಗಳ ಪ್ರತ್ಯಾಯೋಜನೆಯು ಒಂದು ನೂತನ ಪ್ರಯೋಗವಾಗಿದ್ದು, ಇವುಗಳನ್ನು ಅಖೈರುಗೊಳಿಸಲು ಸಾಕಷ್ಟು ಹೆಚ್ಚಿನ ಕಾಲಾವಕಾಶ ಹಿಡಿದಿರುತ್ತದೆ.<br>• ಸ್ಮಾರ್ಟ್ ಸಿಟಿ ಪ್ರಸ್ತಾವನೆಯಲ್ಲಿರುವ ಯೋಜನೆಗಳಿಗೆ ಕಾಮಗಾರಿ ಸ್ಥಳಗಳ ಸರ್ವೆ ಕೈಗೊಂಡು ಪರಿಕಲ್ಪನಾ ವರದಿ ಹಾಗೂ ವಿಸ್ತೃತಾ ಯೋಜನಾ ವರದಿಗಳನ್ನು ತಯಾರಿಸಲು ಸ್ವಲ್ಪ ಹೆಚ್ಚಿನ ಕಾಲಾವಧಿ ಆಗಿರುತ್ತದೆ.<br>• ನೂತನವಾಗಿ ಸ್ಥಾಪಿಸಲಾಗಿರುವ ವಿಶೇಷ ಉದ್ದೇಶಿತ ವಾಹನಗಳಿಗೆ ಮಾನವ ಸಂಪನ್ಮೂಲ ನೇಮಕಾತಿಗೂ ಹೆಚ್ಚಿನ ಕಾಲಾವಧಿ ಹಿಡಿದಿರುತ್ತದೆ.<br>• ಯೋಜನೆಯಡಿ ಪ್ರಮುಖವಾಗಿ ಜನನಿಬಿಡ ಪ್ರದೇಶಗಳಲ್ಲಿ ಸ್ಮಾರ್ಟ್ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದ್ದು, ಅನುಷ್ಠಾನದ ಸಮಯದಲ್ಲಿ ಸ್ಥಳೀಯವಾಗಿ ಬಹಳ ಸಮಸ್ಯೆಗಳನ್ನು ಎದುರಿಸಬೇಕಾಗಿರುತ್ತದೆ. ಈ ಯೋಜನೆಗಳಲ್ಲಿ ಹೆಸ್ಕಾಂ, ಬಿಎಸ್‌ಎನ್‌ಎಲ್, ಗ್ಯಾಸ್ ಪೈಪ್ ಲೈನ್ ಅಳವಡಿಸುವ ಕಂಪನಿ, 24X7 ನೀರು ಸರಬರಾಜು ಯೋಜನೆಗಳು ಹಾಗೂ ಇತರೆ ಇಲಾಖೆಗಳ ಯುಟಿಲಿಟಿ ಶಿಫ್ಟಿಂಗ್ ಅವಶ್ಯಕತೆಯಿರುತ್ತದೆ. ಇದಲ್ಲದೇ ಸ್ಮಾರ್ಟ್ ಸಿಟಿ ಯೋಜನೆಯಡಿ ಕೈಗೊಂಡಿರುವ ಹಲವು ರಸ್ತೆಗಳಲ್ಲಿ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ಹಾಗೂ ಲೋಕೋಪಯೋಗಿ ಇಲಾಖೆಯಿಂದಲೂ ಸಹ |

ಹಲವಾರು ಕಾಮಗಾರಿಗಳನ್ನು ಕೈಗೊಂಡಿದ್ದು, ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ಹಾಗೂ ಲೋಕೋಪಯೋಗಿ ಇಲಾಖೆಯ ಸಮನ್ವಯದೊಂದಿಗೆ ಸ್ಮಾರ್ಟ್ ರಸ್ತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ. ಈ ಕಾರಣಗಳಿಂದಾಗಿ ಕಾಮಗಾರಿಗಳ ಅನುಷ್ಠಾನದಲ್ಲಿ ಅನಿವಾರ್ಯ ವಿಳಂಬವಾಗುತ್ತಿದೆ.

- ಸ್ಮಾರ್ಟ್ ಸಿಟಿ ಯೋಜನೆಯಡಿ ಹಮ್ಮಿಕೊಂಡಿರುವ ಮಾರುಕಟ್ಟೆ ಪುನರಾಭಿವೃದ್ಧಿ ಯೋಜನೆಗಳಲ್ಲಿ ವ್ಯಾಪರಸ್ಥರಿಗೆ ಮತ್ತು ಸ್ಥಳೀಯರ ಮನವೊಲಿಸುವ ಹಾಗೂ ಪುನರ್ ವಸತಿ ಕಲ್ಪಿಸುವ ಕಾರ್ಯಗಳಿಗೆ ಹೆಚ್ಚಿನ ಸಮಯ ಹಿಡಿದಿರುತ್ತದೆ.
- ಕೋವಿಡ್ -19ರ ಕಾರಣದಿಂದಾಗ್ಯೂ 2020 ರ ಸಾಲಿನಲ್ಲಿ 5 ತಿಂಗಳು ಹಾಗೂ 2021ರ ಸಾಲಿನಲ್ಲಿ 3 ತಿಂಗಳು ಕಾಮಗಾರಿಗಳ ಅನುಷ್ಠಾನದಲ್ಲಿ ಅನಿವಾರ್ಯ ವಿಳಂಬವಾಗಿರುತ್ತದೆ.

ನಗರಗಳಲ್ಲಿ ಸ್ಮಾರ್ಟ್ ಸಿಟಿ ಯೋಜನೆಯ ಅನುಷ್ಠಾನದ ಬಗ್ಗೆ ಸರ್ಕಾರವು ಸತತವಾಗಿ ನಿಗಾವಹಿಸಿದ್ದು, ಅದರಂತೆ ಈ ಕೆಳಗಿನ ಸಮರ್ಪಕ ಕ್ರಮಗಳನ್ನು ಕೈಗೊಳ್ಳಲಾಗಿದೆ.

- ಅಭಿಯಾನದ ಮಾರ್ಗಸೂಚಿ ಅನುಸಾರ ಯೋಜನಾ ಅನುಷ್ಠಾನಕ್ಕಾಗಿ ವಿಶೇಷ ಉದ್ದೇಶಿತ ವಾಹನವನ್ನು (Special Purpose Vehicle-SPV) ಕಂಪನಿ ಕಾಯ್ದೆ 2013ರಡಿ ನೋಂದಾಯಿಸಿ ಸ್ಥಾಪಿಸಲಾಗಿದೆ.
- ಪ್ರಸ್ತಾಪಿತ ಯೋಜನೆಗಳಿಗೆ ವಿಸ್ತೃತ ಯೋಜನಾ ವರದಿ ತಯಾರಿಸಿ ಕಾಮಗಾರಿಗಳ ಅನುಷ್ಠಾನದಲ್ಲಿ SPV ಗೆ ನೆರವು ನೀಡಲು ಯೋಜನಾ ನಿರ್ವಹಣಾ ಸಮಾಲೋಚಕರನ್ನು ನೇಮಿಸಲಾಗಿದೆ.
- ಯೋಜನೆಯ ಮಾರ್ಗದರ್ಶನಕ್ಕೆ ಮತ್ತು ಮೇಲುಸ್ತುವಾರಿಗಾಗಿ ರಾಜ್ಯ ಮಟ್ಟದಲ್ಲಿ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ "ರಾಜ್ಯ ಮಟ್ಟದ ಉನ್ನತ ಅಧಿಕಾರಿಯುತ ಸಂಚಾಲನ ಸಮಿತಿಯನ್ನು" ರಚಿಸಲಾಗಿರುತ್ತದೆ. ಈ ಸಮಿತಿಯು ನಿಯಮಿತವಾಗಿ ಸಭೆಗಳನ್ನು ನಡೆಸಿ ಮಾರ್ಗದರ್ಶನ ನೀಡುತ್ತಿರುತ್ತದೆ.
- ನಗರಗಳು ಸಿದ್ಧಪಡಿಸಿರುವ ಕಾಮಗಾರಿಗಳ ವಿಸ್ತೃತ ಯೋಜನಾ ವರದಿಗಳಿಗೆ ತಾಂತ್ರಿಕ ಅನುಮೋದನೆ ನೀಡಲು "ರಾಜ್ಯ ಮಟ್ಟದ ಉಸ್ತುವಾರಿ ಸಂಸ್ಥೆಯಾದ ಕೆಯುಐಡಿಎಫ್‌ಸಿಯಲ್ಲಿ, ಬಾಹ್ಯ ಪರಿಣಿತ ಸದಸ್ಯರನ್ನು ಒಳಗೊಂಡ ತಾಂತ್ರಿಕ ಸಮಿತಿಗಳನ್ನು ರಚಿಸಲಾಗಿದೆ.
- ಯೋಜನೆಯ ಮಾರ್ಗಸೂಚಿಯನ್ವಯ, ಆಯಾ ನಗರಗಳ ಮಾನ್ಯ ಸಂಸತ್ ಸದಸ್ಯರು, ವಿಧಾನ ಸಭಾ ಸದಸ್ಯರು, ಪೂಜ್ಯ ಮಹಾಪೌರರು, ಜಿಲ್ಲಾಧಿಕಾರಿಗಳು, ವ್ಯವಸ್ಥಾಪಕ ನಿರ್ದೇಶಕರು ಸ್ಮಾರ್ಟ್ ಸಿಟಿ ಲಿಮಿಟೆಡ್, ತಾಂತ್ರಿಕ ತಜ್ಞರು, ವಾಣಿಜ್ಯ ಮಂಡಳಿಯ ಸದಸ್ಯರು, ಸ್ವಯಂ ಸೇವಾ ಸಂಸ್ಥೆ ಸದಸ್ಯರು ಹಾಗೂ ಇತರೆ ಸಮುದಾಯ ಆಧಾರಿತ ಸಂಸ್ಥೆಗಳ ಪ್ರತಿನಿಧಿಗಳು ಒಳಗೊಂಡಿರುವ "ಸ್ಮಾರ್ಟ್ ಸಿಟಿ ಅಡ್ವೈಸರಿ ಫೋರಂ" ನ್ನು ಸ್ಥಾಪಿಸಲಾಗಿದೆ ಹಾಗೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ, ಈ ಸಮಿತಿಯು ನಿಯಮಿತವಾಗಿ ಸಭೆಗಳನ್ನು ನಡೆಸಿ ಯೋಜನೆಗಳ ಅನುಷ್ಠಾನ ಹಾಗೂ ಸಮಸ್ಯೆಗಳ ಬಗ್ಗೆ ನಿರಂತರ ಮಾರ್ಗದರ್ಶನ ನೀಡುತ್ತಿವೆ.
- ಮುಂದುವರೆದು, ಯೋಜನಾ ಅನುಷ್ಠಾನದಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡಲು ವಿಶೇಷ ಉದ್ದೇಶಿತ ವಾಹನಗಳಿಗೆ ಮಾರ್ಗದರ್ಶನ ಮತ್ತು ಕಾರ್ಯಚಟುವಟಿಕೆಗಳ ಮೇಲುಸ್ತುವಾರಿಗೆ ಮಾನ್ಯ ನಗರಾಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ "ಸ್ಮಾರ್ಟ್ ಸಿಟಿ ಅನುಷ್ಠಾನ ಮತ್ತು ಪರಿಶೀಲನಾ ಸಮಿತಿ" ಯನ್ನು ನಗರ ಮಟ್ಟದಲ್ಲಿ ರಚಿಸಲಾಗಿದೆ. ಈ ಸಮಿತಿಗೆ ಜಿಲ್ಲಾ ಉಸ್ತುವಾರಿ ಸಚಿವರು ಸಹ-ಅಧ್ಯಕ್ಷರಾಗಿದ್ದು, ಲೋಕಸಭಾ ಸದಸ್ಯರಗಳು, ವಿಧಾನಸಭಾ ಸದಸ್ಯರಗಳು ಸಮಿತಿಯ ಸದಸ್ಯರಾಗಿದ್ದು, ಕಾಲಕಾಲಕ್ಕೆ ಸಭೆಗಳನ್ನು ನಡೆಸಲಾಗುತ್ತಿದೆ.

ಸರ್ಕಾರದಿಂದ ಕೈಗೊಂಡಿರುವ ಮೇಲಿನ ಪೂರಕ ಕ್ರಮಗಳ ಮೂಲಕ ಯೋಜನೆಯ ಅನುಷ್ಠಾನಕ್ಕೆ ಎದುರಾಗಿರುವ ಸವಾಲುಗಳಿಗೆ ಸೂಕ್ತ ಪರಿಹಾರಗಳನ್ನು ಕಂಡುಕೊಂಡು ಈಗ ಕಾಮಗಾರಿಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಿಯಮಿತವಾಗಿ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಲಾಗುತ್ತಿದೆ.

ಸ್ಮಾರ್ಟ್ ಸಿಟಿ ಅನುದಾನದಡಿ ಹಾಗೂ ಪಿಪಿಪಿ ಮಾದರಿಯಡಿ ಕೈಗೊಂಡಿರುವ ಒಟ್ಟು ಕಾಮಗಾರಿಗಳು ಹಾಗೂ ಅವುಗಳ ಪ್ರಸ್ತುತ ಹಂತದ ನಗರವಾರು ವಿವರ ಈ ಕೆಳಕಂಡಂತಿದೆ:

(ರೂ. ಕೋಟಿಗಳಲ್ಲಿ)

| ನಗರ | ಒಟ್ಟು ಕಾಮಗಾರಿ | | ಮುಕ್ತಾಯಗೊಂಡ ಕಾಮಗಾರಿ | | ಪ್ರಗತಿಯಲ್ಲಿರುವ ಕಾಮಗಾರಿ | | ಟೆಂಡರ್ ಹಂತದ ಕಾಮಗಾರಿ | |
|---|---|---|---|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| ಬೆಳಗಾವಿ | 109 | 1141.06 | 65 | 375.96 | 44 | 765.10 | 0 | 0 |
| ದಾವಣಗೆರೆ | 115 | 1005.99 | 75 | 446.78 | 40 | 559.21 | 0 | 0 |
| ಹುಬ್ಬಳ್ಳಿ-ಧಾರವಾಡ | 64 | 979.97 | 49 | 370.7 | 15 | 609.27 | 0 | 0 |
| ಮಂಗಳೂರು | 63 | 1402.81 | 22 | 106.59 | 40 | 1096.22 | 1 | 200.00 |
| ಶಿವಮೊಗ್ಗ | 74 | 1145.44 | 49 | 454.87 | 24 | 550.47 | 1 | 140.1 |
| ತುಮಕೂರು | 185 | 1282.60 | 139 | 679.35 | 46 | 603.25 | 0 | 0 |
| ಬೆಂಗಳೂರು | 47 | 934.11 | 13 | 85.53 | 34 | 848.58 | 0 | 0 |
| **ಒಟ್ಟು** | **657** | **7891.98** | **412** | **2519.78** | **243** | **5032.10** | **2** | **340.10** |

ಇಲ್ಲಿಯವರೆಗೆ ಸ್ಮಾರ್ಟ್ ಸಿಟಿ ಯೋಜನೆಯಡಿ ಕೇಂದ್ರ ಸರ್ಕಾರದಿಂದ ರೂ.2704.91 ಕೋಟಿ ಹಾಗೂ ರಾಜ್ಯ ಸರ್ಕಾರದಿಂದ ರೂ.2900.00 ಕೋಟಿಯಂತೆ ಒಟ್ಟು ರೂ.5604.91 ಕೋಟಿ ಅನುದಾನ ಬಿಡುಗಡೆಯಾಗಿದ್ದು, ರೂ.4727.31 ಕೋಟಿ (ಶೇಕಡಾ 84%) ಆರ್ಥಿಕ ಪ್ರಗತಿ ಸಾಧಿಸಲಾಗಿರುತ್ತದೆ.

ಕೇಂದ್ರ ಸರ್ಕಾರವು ಸ್ಮಾರ್ಟ್ ಸಿಟಿ ಅಭಿಯಾನದ ಕಾಲಾವಧಿಯನ್ನು ಜೂನ್ -2023 ರವರೆಗೆ ವಿಸ್ತರಿಸಿದ್ದು, ಬಾಕಿ ಉಳಿದ ಕಾಮಗಾರಿಗಳನ್ನು ಈ ಕಾಲಮಿತಿಯೊಳಗೆ ಪೂರ್ಣಗೊಳಿಸುವಂತೆ ಆಯಾ ಸ್ಮಾರ್ಟ್ ಸಿಟಿಗಳ ವ್ಯವಸ್ಥಾಪಕ ನಿರ್ದೇಶಕರಿಗೆ ಸರ್ಕಾರವು ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಆ) ಪ್ರಸ್ತುತ ಯಾವ ಯಾವ ಜಿಲ್ಲೆಗಳಲ್ಲಿ ಒಟ್ಟು ಎಷ್ಟೆಷ್ಟು ಕಾಮಗಾರಿಗಳನ್ನು ಸರ್ಕಾರವು ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ; (ಜಿಲ್ಲಾವಾರು ಕಾಮಗಾರಿಗಳ ಪ್ರಗತಿವಾರು ಮಾಹಿತಿಯನ್ನು ನೀಡುವುದು)

ಸ್ಮಾರ್ಟ್ ಸಿಟಿ ಅನುದಾನದಡಿ ಹಾಗೂ ಪಿಪಿಪಿ ಮಾದರಿಯಡಿ ನಗರಗಳಲ್ಲಿ ಕೈಗೊಂಡಿರುವ ಒಟ್ಟು ಕಾಮಗಾರಿಗಳು ಹಾಗೂ ಅವುಗಳ ಪ್ರಸ್ತುತ ಹಂತದ ವಿವರ ಈ ಕೆಳಕಂಡಂತಿದೆ:

(ರೂ.ಕೋಟಿಗಳಲ್ಲಿ)


| ನಗರ | ಒಟ್ಟು ಕಾಮಗಾರಿ | | ಮುಕ್ತಾಯಗೊಂಡ ಕಾಮಗಾರಿ | | ಪ್ರಗತಿಯಲ್ಲಿರುವ ಕಾಮಗಾರಿ | | ಟೆಂಡರ್ ಹಂತದ ಕಾಮಗಾರಿ | |
|---|---|---|---|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| ಬೆಳಗಾವಿ | 109 | 1141.06 | 65 | 375.96 | 44 | 765.10 | 0 | 0 |
| ದಾವಣಗೆರೆ | 115 | 1005.99 | 75 | 446.78 | 40 | 559.21 | 0 | 0 |
| ಹುಬ್ಬಳ್ಳಿ-ಧಾರವಾಡ | 64 | 979.97 | 49 | 370.7 | 15 | 609.27 | 0 | 0 |
| ಮಂಗಳೂರು | 63 | 1402.81 | 22 | 106.59 | 40 | 1096.22 | 1 | 200.00 |
| ಶಿವಮೊಗ್ಗ | 74 | 1145.44 | 49 | 454.87 | 24 | 550.47 | 1 | 140.1 |
| ತುಮಕೂರು | 185 | 1282.60 | 139 | 679.35 | 46 | 603.25 | 0 | 0 |
| ಬೆಂಗಳೂರು | 47 | 934.11 | 13 | 85.53 | 34 | 848.58 | 0 | 0 |
| **ಒಟ್ಟು** | **657** | **7891.98** | **412** | **2519.78** | **243** | **5032.10** | **2** | **340.10** |

| | | |
|---|---|---|
| | | ಮೇಲೆ ವಿವರಿಸಿದಂತೆ ಪ್ರಸ್ತುತ 02 ಕಾಮಗಾರಿಗಳಷ್ಟೇ ಟೆಂಡರ್ ಹಂತದಲ್ಲಿ ಇರುತ್ತವೆ. ಸದರಿ ಕಾಮಗಾರಿಗಳು ಪಿಪಿಪಿ ಕಾಮಗಾರಿಗಳಾಗಿದ್ದು, ಸ್ಮಾರ್ಟ್ ಸಿಟಿ ಅನುದಾನದ ಮೇಲೆ ಅವಲಂಬಿತವಾಗಿರುವುದಿಲ್ಲ. ಮುಂದುವರೆದು, ಪ್ರಸ್ತುತ ಸ್ಮಾರ್ಟ್ ಸಿಟಿ ಯೋಜನೆಯಡಿ ಯಾವುದೇ ಕಾಮಗಾರಿಗಳು ವಿಸ್ತೃತ ಯೋಜನಾ ವರದಿ (ಡಿ.ಪಿ.ಆರ್) ಹಂತದಲ್ಲಿ ಇರುವುದಿಲ್ಲ. |
| ಇ) | ಈ ಯೋಜನೆಯಡಿಯಲ್ಲಿ ಕಾಮಗಾರಿಗಳನ್ನು ಮುಕ್ತಾಯ ಮಾಡಲು ಜೂನ್-2023 ರ ಗಡುವು ನೀಡಿದ್ದು, ಈ ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಮುಗಿಸದಿದ್ದಲ್ಲಿ, ಕೇಂದ್ರ ಸರ್ಕಾರವು ಈ ಯೋಜನೆಗೆ ಮೀಸಲಿಟ್ಟ ಹಣವನ್ನು ವಾಪಸ್ಸು ಪಡೆಯುವುದರ ಬಗ್ಗೆ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆಯನ್ನು ನೀಡಿರುವುದರ ಬಗ್ಗೆ ಸರ್ಕಾರದ ಕ್ರಮವೇನು? (ಸಂಪೂರ್ಣ ವಿವರವನ್ನು ನೀಡುವುದು) | 2020 ಹಾಗೂ 2021ನೇ ಸಾಲಿನಲ್ಲಿ ಕೋವಿಡ್-19 ಸಾಂಕ್ರಮಿಕ ರೋಗದಿಂದ ವಿಧಿಸಲಾಗಿದ್ದ ಲಾಕ್ ಡೌನ್ ಹಾಗೂ ಕೆಲಸಗಾರರ ಕೊರತೆಯನ್ನು ಪರಿಗಣಿಸಿ ಕೇಂದ್ರ ನಗರಾಭಿವೃದ್ಧಿ ಸಚಿವಾಲಯವು ಸ್ಮಾರ್ಟ್ ಸಿಟಿ ಯೋಜನೆಯ ಅನುಷ್ಠಾನ ಕಾಲಮಿತಿಯನ್ನು ಜೂನ್-2023 ರವರೆಗೆ ವಿಸ್ತರಿಸಿರುತ್ತದೆ.<br><br>ಯೋಜನಾ ಅನುಷ್ಠಾನದಲ್ಲಿ ಎದುರಾಗುವ ಅನೇಕ ಸವಾಲುಗಳಿಗೆ ಸೂಕ್ತ ಪರಿಹಾರಗಳನ್ನು ಕಂಡುಕೊಂಡು ಕಾಮಗಾರಿಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಿಯಮಿತವಾಗಿ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಲಾಗುತ್ತಿದೆ.<br><br>ಅದರಂತೆ ರಾಜ್ಯದ ಎಲ್ಲಾ 7 ಸ್ಮಾರ್ಟ್ ಸಿಟಿಗಳಿಗೆ ತಿಂಗಳವಾರು ಭೌತಿಕ ಮತ್ತು ಆರ್ಥಿಕ ಗುರಿಗಳನ್ನು ನಿಗದಿಪಡಿಸಿದ್ದು, ಜೂನ್-2023 ಪೂರ್ವದಲ್ಲಿಯೇ ಬಾಕಿ ಇರುವ 295 ಸ್ಮಾರ್ಟ್‌ಸಿಟಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. |

ಸಂಖ್ಯೆ:ನಅಇ 154 ಸಿಎಸ್ಎಸ್ 2022

**(ಬಿ.ಎ.ಬಸವರಾಜ)**
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು